ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 06-04-2017

# ಪತ್ರಿಕಾ ಪ್ರಕಟಣೆ

## ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹತ್ತೊಂಭತ್ತನೇ ವಾರ್ಷಿಕ ಘಟಿಕೋತ್ಸವ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹತ್ತೊಂಭತ್ತನೇ ವಾರ್ಷಿಕ ಘಟಿಕೋತ್ಸವವನ್ನು ನಿಮ್ಹಾನ್ಸ್ ಕನ್ವೆನ್‌ಷನ್ ಸೆಂಟರ್‌ನಲ್ಲಿ ಏರ್ಪಡಿಸಲಾಗಿತ್ತು.

ರಾಜ್ಯಪಾಲ ವಜುಭಾಯ್ ವಾಲಾ ಅವರು ಆರೋಗ್ಯ ವಿಜ್ಞಾನಗಳ ಪದವೀಧರರಿಗೆ ಪದವಿ ಪ್ರದಾನ ಮಾಡಿ ಶುಭ ಕೋರಿದರು.

ರಾಜ್ಯಪಾಲರು ಒಟ್ಟು 69 ಪದವೀಧರರಿಗೆ 103 ಚಿನ್ನದ ಪದಕ ಹಾಗೂ 9 ನಗದು ಬಹುಮಾನವನ್ನು ವಿತರಿಸಿದರು. ದಾವಣಗೆರೆಯ ಜೆ.ಜೆ.ಎಂ ವೈದ್ಯಕೀಯ ಕಾಲೇಜಿನ ಡಾ॥ ದೀಪ್ತಿ ಅಗರ್‌ವಾಲ್ ಅವರು 5 ಚಿನ್ನ ಪದಕ ಹಾಗೂ ಒಂದು ನಗದು ಬಹುಮಾನವನ್ನು ರಾಜ್ಯಪಾಲರಿಂದ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಆರೋಗ್ಯ ವಿಜ್ಞಾನಗಳ ಕ್ಷೇತ್ರದಲ್ಲಿ ಮಹತ್ಸಾದನೆಗೈದ ಡಾ॥ ಕುತುಪಾಡಿ ಗೋವಿಂದ ದಾಸ್ ಹಾಗೂ ಡಾ॥ ಗೋವಿಂದರಾಜ್ ಸುಬ್ರಮಣಿ ಅವರಿಗೆ ಗೌರವ ಪದವಿ “ಡಾಕ್ಟರ್ ಆಫ್ ಸೈನ್ಸ್” ಪ್ರದಾನ ಮಾಡಲಾಯಿತು.

ಮಾನವ ತಳಿಶಾಸ್ತ್ರ ಕೇಂದ್ರದ ನಿರ್ದೇಶಕರಾದ ಡಾ॥ ಹೆಚ್.ಜಿ.ಶರತ್ ಚಂದ್ರ ಅವರು ಘಟಿಕೋತ್ಸವದ ಭಾಷಣ ಮಾಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲದ ಕುಲಪತಿ ಡಾ॥ ಕೆ.ಎಸ್. ರವೀಂದ್ರನಾಥ್, ಕುಲಸಚಿವ ಡಾ॥ ಎಂ.ಕೆ.ರಮೇಶ್ ಮತ್ತು ಡಾ॥ ಸಿ.ಎಂ.ನೂರ್ ಮನ್ಸೂರ್ ಅವರು ಉಪಸ್ಥಿತರಿದ್ದರು.

ಎಂಎಸ್/ಜೆಡಿ/ಕೆಎಂ

# ಏರ್‌ಮನ್ ಹುದ್ದೆಗಳಿಗೆ ನೇಮಕಾತಿ ರ್‍ಯಾಲಿ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

**ಹಾಸನದಲ್ಲಿ ಏಪ್ರಿಲ್ 27 ರಿಂದ 29 ರ ವರೆಗೆ ಭಾರತೀಯ ವಾಯುಪಡೆಯ ಏರ್‌ಮನ್ ಹುದ್ದೆಗಳಿಗೆ ನೇಮಕಾತಿ ರ್‍ಯಾಲಿ ನಡೆಯಲಿದೆ.**

**ಹಾಸನದ ಸಾಲಗಾಮೆ ರಸ್ತೆಯಲ್ಲಿರುವ ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ರ್‍ಯಾಲಿಯಲ್ಲಿ ಗ್ರೂಪ್ ವೈ ಟ್ರೇಡ್‌ಗಳ {ಆಟೋಮೊಬೈಲ್ ಟೆಕ್ನಿಷಿಯನ್, ಗ್ರೌಂಡ್ ಟ್ರೇನಿಂಗ್ ಇನ್‌ಸ್ಟ್ರಕ್ಟರ್, ಐಎಎಫ್ (ಪೊಲೀಸ್)} ಏರ್‌ಮೆನ್ ಹುದ್ದೆಗಳಿಗೆ ಆಯ್ಕೆ ನಡೆಯಲಿದೆ.**

**1997ರ ಜುಲೈ 7 ರಿಂದ 2000ದ ಡಿಸೆಂಬರ್ 20ರ ನಡುವೆ ಜನಿಸಿದ ಕನಿಷ್ಠ 165 ಸೆಂ.ಮೀ. ಎತ್ತರದ ಕರ್ನಾಟಕ ರಾಜ್ಯದ ಅವಿವಾಹಿತ ಪುರುಷರು ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಬಹುದು.**

**ಅಭ್ಯರ್ಥಿಗಳು ಇಂಟರ್‌ಮೀಡಿಯೆಟ್/ ಪಿಯುಸಿ/ 10+2 ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಕೇಂದ್ರ/ ರಾಜ್ಯ ಶಿಕ್ಷಣ ಮಂಡಳಿಗಳು ಅನುಮೋದಿಸಿದ ಯಾವುದೇ ವಿಷಯಗಳಲ್ಲಿ ಕನಿಷ್ಠ ಶೇ. 50 ರಷ್ಟು ಸರಾಸರಿ ಅಂಕ ಹಾಗೂ ಇಂಗ್ಲಿಷ್‌ನಲ್ಲಿ ಕನಿಷ್ಠ ಶೇ. 50ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.**

**ಅರ್ಹ ಅಭ್ಯರ್ಥಿಗಳು ಪರೀಕ್ಷಾ ಸ್ಥಳದಲ್ಲಿ ಮೂಲ ಅಂಕಪಟ್ಟಿ ಮತ್ತು ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರ, ಇಂಟರ್‌ಮೀಡಿಯೆಟ್/ ಪಿಯುಸಿ/ 10+2 ಉತ್ತೀರ್ಣರಾದ ಕುರಿತ ಪ್ರಮಾಣ ಪತ್ರ ಮತ್ತು ಎಲ್ಲಾ ಪ್ರಮಾಣ ಪತ್ರಗಳ ನಾಲ್ಕು ದೃಢೀಕೃತ ಪ್ರತಿಗಳು ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ 7 ಭಾವಚಿತ್ರಗಳೊಂದಿಗೆ ಹಾಜರಾಗಬೇಕು.**

ಹೆಚ್ಚಿನ ಮಾಹಿತಿಗಾಗಿ ಭಾರತೀಯ ವಾಯುಪಡೆಯ ವೆಬ್‌ಸೈಟ್ www.airmenselection.gov.in ಅಥವಾ 7 ಎರ್‌ಮೆನ್ ಸೆಲೆಕ್ಷನ್ ಸೆಂಟರ್, ನಂ. 1, ಕಬ್ಬನ್ ರಸ್ತೆ, ಬೆಂಗಳೂರು– 560001, ದೂರವಾಣಿ ಸಂಖ್ಯೆ 080–25592199, ಇ–ಮೇಲ್ co.7asc-ka@gov.in ಇಲ್ಲಿ ಸಂಪರ್ಕಿಸಬಹುದು. ಅಭ್ಯರ್ಥಿಗಳು ತಮ್ಮ ಸಮೀಪದ ಜಿಲ್ಲಾ ಉದ್ಯೋಗಾಧಿಕಾರಿಗಳನ್ನು ಸಹ ಸಂಪರ್ಕಿಸಬಹುದು.

ಎಂಎಸ್/ಜೆಡಿ/ಕೆಎಂ

## ಗಾಂಧಿವಾದಿ ಡಾ: ಹೊ ಶ್ರೀನಿವಾಸಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಏಪ್ರಿಲ್ 7 (ಕರ್ನಾಟಕ ವಾರ್ತೆ) :

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹಾಗೂ ಅಪ್ಪಟ ಗಾಂಧಿವಾದಿ ಡಾ ಹೊ ಶ್ರೀನಿವಾಸಯ್ಯ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಸತ್ವ–ಭರಿತ ತತ್ವಗಳು ಹಾಗೂ ಮೌಲಿಕ ಆದರ್ಶಗಳಿಂದ ಪ್ರಭಾವಿತರಾದ ಲಕ್ಷಾಂತರ ಮಂದಿಯಲ್ಲಿ ಶ್ರೀನಿವಾಸಯ್ಯ ಅವರೂ ಒಬ್ಬರು. ಮೆಕಾನಿಕಲ್ ಇಂಜಿನಿಯರ್ ಆಗಿ ಜರ್ಮನಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಶ್ರೀನಿವಾಸಯ್ಯ ಅವರಿಗೆ ಗಾಂಧೀಜಿ ಅವರ ಸರಳತೆಯ ಸಿದ್ಧಾಂತ ಅತ್ಯಾಕರ್ಷಕವಾಗಿ ಕಂಡಿತು. ಸರಳತೆ ಬೋಧಿಸಲು ಸುಲಭ. ಆದರೆ, ಪಾಲಿಸಲು ಕಷ್ಟ ಎಂಬುದನ್ನು ಮನಗಂಡ ಶ್ರೀನಿವಾಸಯ್ಯ ಅವರು ಮೊದಲು ಸರಳತಾ ದೀಕ್ಷೆ ಪಡೆದರು. ಖಾದಿ ಬಟ್ಟೆ ತೊಟ್ಟರು. ಜಾತ್ಯಾತೀತ ನಿಲುವಿಗೆ ಬದ್ಧರಾದರು. ಗಾಂಧೀಜಿ ಅವರ ಸಂದೇಶಗಳನ್ನು ಪ್ರಚುರಪಡಿಸಲು ಟೊಂಕ ಕಟ್ಟಿ ನಿಂತರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿ ಮೂರು ದಶಕಗಳಿಗೂ ಹೆಚ್ಚು ಸೇವೆ ಸಲ್ಲಿಸಿದ ಶ್ರೀನಿವಾಸಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಗಾಂಧಿ ಭವನವನ್ನು ಸದಾ ಚಟುವಟಿಕೆಗಳ ಕೇಂದ್ರವನ್ನಾಗಿಸಿದ್ದರು. ಮದ್ಯಪಾನ ಸಂಯಮ ಹಾಗೂ ಮಾದಕ ವಸ್ತುಗಳ ಬಳಕೆಯ ತಡೆ ಮೂಲಕ ವ್ಯಸನ–ಮುಕ್ತ ಕರ್ನಾಟಕ ರೂಪಿಸಲು ಶ್ರಮಿಸಿದ್ದರು. ಮಹಾತ್ಮ ಗಾಂಧಿ ಅವರ 150 ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ವರ್ಷವಿಡೀ ಕಾರ್ಯಕ್ರಮಗಳನ್ನು ರೂಪಿಸಿ ಅತ್ಯಂತ ಸರಳತೆಯಿಂದ ಹಾಗೂ ಅತ್ಯಂತ ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಯೋಜಿಸಿದ್ದರು. ಶ್ರೀನಿವಾಸಯ್ಯ ಅವರ ಕನಸು ಸಾಕಾರಗೊಳ್ಳುವ ಮುನ್ನವೇ ಅವರು ಇಲ್ಲವಾಗಿದ್ದಾರೆ ಎಂಬುದು ನನ್ನಲ್ಲಿ ಅತ್ಯಂತ ದುಃಖ ಹಾಗೂ ನೋವನ್ನು ಉಂಟು ಮಾಡಿದೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಡಿ ಪಿ ಎಂ

ಡಾ. ಹೋ. ಶ್ರೀನಿವಾಸಯ್ಯ ಅವರ ವ್ಯಕ್ತಿ ಚಿತ್ರ:

ಹಿರಿಯ ಗಾಂಧೀವಾದಿ ಸ್ವಾತಂತ್ರ್ಯ ಹೋರಾಟಗಾರ ಹೋ. ಶ್ರೀನಿವಾಸಯ್ಯ ಅವರು ಗುರುವಾರ ಮುಂಜಾನೆ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದರು ಅವರಿಗೆ 93 ವರ್ಷ ವಯಸ್ಸಾಗಿತ್ತು. ಅವರ ಅಂತಿಮ ಇಚ್ಛೆಯಂತೆ ಪಾರ್ಥಿವ ಶರೀರವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದೇಹದಾನ ಮಾಡಲಾಗಿದೆ. ಸರ್ಕಾರವು ಹೋ. ಶ್ರೀನಿವಾಸಯ್ಯನವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು ಅವರ ಪಾರ್ಥಿವ ಶರೀರಕ್ಕೆ ಸಕಲ ಪೊಲೀಸ್ ಗೌರವ ರಕ್ಷೆ ನೀಡಲು ಅಧಿಸೂಚನೆ ಹೊರಡಿಸಿದೆ.

1925 ರಲ್ಲಿ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಚೌದರಿಕೊಪ್ಪಲು ಗ್ರಾಮದಲ್ಲಿ ಜನಿಸಿದ ಹೋ ಶ್ರೀನಿವಾಸಯ್ಯ ಅವರದು ಹೋರಾಟದ ಬದುಕು. ಅವರು ಇಂಜಿನಿಯರಿಂಗ್ ಪದವೀಧರರು. ಅವರು ಎಚ್.ಎ.ಎಲ್.ನಲ್ಲಿ ಕಾರ್ಯ ನಿರ್ವಹಿಸಿ ಬಿ.ಇ.ಎಂ.ಎಲ್.ನಲ್ಲಿ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ 1983 ರಲ್ಲಿ ನಿವೃತ್ತಿಗೊಂಡಿದ್ದರು. ಇವರು 1942–47 ರವರೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯಪಾತ್ರ ವಹಿಸಿದ್ದರು. 1946ರಲ್ಲಿ ವಂದೇ ಮಾತರಂ ಸಂಗ್ರಾಮದಲ್ಲಿ ಭಾಗವಹಿಸಿದ್ದರು.

1942–50 ರವರೆಗೆ ಯುವ ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು. 1943 ರಲ್ಲಿ ಚರಕ ಕೇಂದ್ರ ಹಾಗೂ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದರು. ಅವರು ಕಳೆದ 25 ವರ್ಷಗಳಿಂದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಲ್ಲಿ ಅಧ್ಯಕ್ಷರಾಗಿದ್ದರು. ಅವರು ಗಾಂಧೀ ಭವನದ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕಳೆದ ನಾಲ್ಕು ದಶಕಗಳಿಂದ ಅವರು ಸಮಾಜ ಸೇವೆ, ಗಾಂಧೀ ತತ್ವಗಳ ಪ್ರಚಾರದಲ್ಲಿ ತೊಡಗಿದ್ದರು. ಗಾಂಧೀವಾಧಿ, ಪತ್ರಕರ್ತ, ಸಮಾಜ ಸೇವೆ, ಸಾಹಿತಿ ಹೀಗೆ ನಾನಾ ಪಾತ್ರಗಳನ್ನು ಇವರು ಯಶಸ್ವಿಯಾಗಿ ನಿರ್ವಹಿಸಿದರು.

ಸಾವಿರಾರು ಶಾಲಾ ಕಾಲೇಜುಗಳಲ್ಲಿ ಗಾಂಧೀ ಕುರಿತಾದ ಪ್ರವಚನ ನೀಡಿ ಯುವ ಮನಗಳಿಗೆ ಮಾರ್ಗದರ್ಶನ ನೀಡಿದರು. ಸಹಕಾರ ತತ್ವದ ಮೇಲೆ ಸಹಕಾರ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಗಾಂಧೀ ಸಾಹಿತ್ಯ ಸಂಘ, ಗ್ರಂಥ ಭಂಡಾರ ಸ್ಥಾಪಿಸಿದರು. ಪ್ರಕೃತಿ ಜೀವನ ಕೇಂದ್ರದ ಸ್ಥಾಪಕ ಹಾಗೂ ಅಧ್ಯಕ್ಷರಾಗಿದ್ದರು. ಕರ್ನಾಟಕ ಅಲ್ಲದೆ ಹೊರ ನಾಡಿನಲ್ಲೂ ತರಗತಿ ವ್ಯವಸ್ಥೆ ಮಾಡಿಸಿದ್ದರು. ಅವರು ಹುಟ್ಟೂರಾದ ಚೌದರಿಕೊಪ್ಪಲಿನಲ್ಲಿ ಶ್ರೀರಾಮ ಸೇವಾ ಯುವಜನ ಸೇವಾ ಸಂಸ್ಥೆ ಪ್ರಾರಂಭಿಸಿದ್ದರು. ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠ, ಬೆಂಗಳೂರು ಶಾಖೆ ಧರ್ಮದರ್ಶಿಗಳು ಸೇರಿದಂತೆ ಇತರ ಧಾರ್ಮಿಕ

ಸಂಸ್ಥೆಗಳಲ್ಲಿ ಸಕ್ರೀಯವಾಗಿ ವಿವಿಧ ಸ್ಥಾನಗಳಲ್ಲಿ ಕೆಲಸ ನಿರ್ವಹಿಸಿದ್ದರು. ಇವರು "ಪ್ರಕೃತಿ ಜೀವನ" ಎಂಬ ಕನ್ನಡ ಪತ್ರಿಕೆಯ ಸಂಪಾದಕರಾಗಿದ್ದರು.

ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪ್ರಕೃತಿ ಚಿಕಿತ್ಸೆ ಯೋಗ ಸೇವೆಗಾಗಿ ಸರ್ಕಾರದ ಪತಂಜಲಿ ಸುವರ್ಣ ಪದಕ, ಸಮಾಜ ಸೇವೆಗೆ ರಾಜ್ಯ ಪ್ರಶಸ್ತಿ, ಯೋಗಿಶ್ರೀ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಕನ್ನಡಶ್ರೀ, ಕರ್ನಾಟಕ ಶ್ರೀ, ಸಮಾಜ ಸೇವಾಭೂಷಣ ಚುಂಚಶ್ರೀ, ಮಾಸ್ಟರ್ ಆರ್ಟ್ ಮಿಲೆನಿಯಮ್, ವಾರ್ತಾ ಇಲಾಖೆಯಿಂದ ಗಾಂಧೀ ಸೇವಾ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ಕರ್ಮಯೋಗಿ ಎಂ.ಎಸ್. ರಾಮಯ್ಯ ಪ್ರಶಸ್ತಿ, ವೂಡೆ ಪ್ರಶಸ್ತಿ, ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ, ಹಂಸರತ್ನ ಪ್ರಶಸ್ತಿ ಲಭಿಸಿದೆ. ಇವರಿಗೆ 1988 ರಲ್ಲಿ ದೆಹಲಿ ಪ್ರಕೃತಿ ಚಿಕತ್ಸಾ ಪರಿಷತ್ ನಿಂದ ಪ್ರಕೃತಿ ಚಿಕಿತ್ಸೆಗೆ ಗೌರವ ಡಾಕ್ಟರೇಟ್ ಲಭಿಸಿದೆ.

ಸಾಹಿತಿಯಾಗಿಯೂ ಹೆಸರು ಮಾಡಿದ ಇವರಿಗೆ ಇವರ "ನಾ ಕಂಡ ಜರ್ಮನಿ" ಕೃತಿಗೆ 1970 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅಲ್ಲದೆ ಇವರು ನೂರಾರು ಪುಸ್ತಕಗಳನ್ನು ಬರೆದಿದ್ದಾರೆ. ಅಲ್ಲದೆ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು. ಆಕಾಶವಾಣಿಯ ಮೂಲಕ ಗಾಂಧೀ ಚಿಂತನೆ ಕುರಿತು ಹಲವು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಇವರಿಗೆ ಅನೇಕ ಸನ್ಮಾನಗಳು ಸಂದಿವೆ.

ಎಸ್‌ಎಂ/ಕವನ/ಕೆಎಂ

# ಡಾ. ಹೊ. ಶ್ರೀನಿವಾಸಯ್ಯ ಅವರ ನಿಧನಕ್ಕೆ ಗಣ್ಯರ ಶೋಕ

**ಬೆಂಗಳೂರು, ಏಪ್ರಿಲ್ 6 , (ಕರ್ನಾಟಕ ವಾರ್ತೆ)**

ಹಿರಿಯ ಗಾಂಧೀವಾದಿ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಹೊ. ಶ್ರೀನಿವಾಸಯ್ಯ ಅವರ ನಿಧನಕ್ಕೆ ರಾಜ್ಯದ ಹಲವು ಗಣ್ಯರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ತಮ್ಮ ಸಂದೇಶದಲ್ಲಿ ಬಾಲ್ಯದಿಂದಲೇ ಗಾಂಧೀಜಿಯವರ ಬಗ್ಗೆ ಅಪಾರ ಒಲವು ಬೆಳೆಸಿಕೊಂಡಿದ್ದ ಹೊ. ಶ್ರೀನಿವಾಸಯ್ಯ ಗಾಂಧೀಜಿಯವರನ್ನು ವೈಯಕ್ತಿಕವಾಗಿ ಬಲ್ಲವರಾಗಿದ್ದರು.

ನಂತರ ತಮ್ಮ ಇಡೀ ಬದುಕನ್ನು ಗಾಂಧೀಜಿಯವರ ತತ್ವ ಮತ್ತು ಸಂದೇಶವನ್ನು ಪಸರಿಸುವ ಕೆಲಸಕ್ಕಾಗಿ ಮೀಡಲಿಟ್ಟವರು. ಗಾಂಧೀ ಸ್ಮಾರಕ ನಿಧಿ ಮೂಲಕ ಕಳೆದ 4 ದಶಕಗಳಿಂದ ಗಾಂಧೀಜಿಯವರ ಜೀವನಾದರ್ಶಗಳ ಮತ್ತು ತತ್ವ ಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಇವರ ನಿಧನದಿಂದ ಗಾಂಧೀ ಯುಗದ ಕೊಂಡಿಯೊಂದ ಕಳಚಿದಂತಾಗಿದೆ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**ಛಾಯಾಚಿತ್ರ ಶೀರ್ಷಿಕೆ: DSC5950**

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹಾಗೂ ಅಪ್ಪಟ ಗಾಂಧಿವಾದಿ ಡಾ ಹೊ ಶ್ರೀನಿವಾಸಯ್ಯ ಅವರ ನಿಧನಕ್ಕೆ ಶ್ರೀ ಎಂ. ಲಕ್ಷ್ಮೀನಾರಾಯಣ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಅವರು ಅಂತಿಮ ನಮನ ಸಲ್ಲಿಸಿದರು.

ಎಂಎಸ್/ಕೆಎಂ

## ಲಾರಿ ಮುಷ್ಕರ ಕೆ.ಎಸ್.ಆರ್.ಟಿ.ಸಿ.ಯಿಂದ ವಿಶೇಷ ವ್ಯವಸ್ಥೆ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

**ಲಾರಿ ಮುಷ್ಕರದ ಕಾರಣ ಸಾರ್ವಜನಿಕರಿಗೆ ಅಗತ್ಯ ವಸ್ತುಗಳ ಪೂರೈಕೆ ಅನುಕೂಲವಾಗುವಂತೆ ಕೆಎಸ್ಆರ್ ಟಿ ಸಿಯು ತನ್ನ ಎಲ್ಲಾ 15 ವಿಭಾಗಗಳಿಗೆ ಆದೇಶ ನೀಡಿದ್ದು, ಜಿಲ್ಲಾಡಳಿತ ಕೋರಿಕೆಗೆ ಅನುಗುಣವಾಗಿ ಬಸ್ಸುಗಳನ್ನು ಪೂರೈಸಲು ಸೂಚಿಸಿದೆ. ಈಗಾಗಲೇ ಬೆಂಗಳೂರು ವ್ಯಾಪ್ತಿಯಲ್ಲಿ ಸುಮಾರು 20 ಬಸ್ಸುಗಳನ್ನು ನೆನ್ನೆಯ ದಿನ ಒದಗಿಸಲಾಗಿದ್ದು, ವೈಟ್ ಫೀಲ್ಡ್ ವ್ಯಾಪ್ತಿಯಿಂದ ಅಗತ್ಯ ಸೇವೆಗಳನ್ನು ಸಾಗಾಟ ಮಾಡಲಾಗಿದೆ.**

ಎಂಎಸ್/ಜೆಡಿ/ಕೆಎಂ

## ಮಲೇರಿಯಾ ಮುಕ್ತ ದೇಶ ಅಭಿಯಾನ

ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)

**ಭಾರತವನ್ನು ಮಲೇರಿಯಾ ಮುಕ್ತ ದೇಶವಾಗಿಸಲು ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಅಭಿಯಾನ  ಸಂಬಂಧ ರಚಿಸಿರುವ ಉನ್ನತ ಮಟ್ಟದ ಸಮಿತಿಯ ಸಭೆ  ಕುರಿತು ಚರ್ಚಿಸಲು ಇತ್ತೀಚೆಗೆ ಸಭೆ ನಡೆಯಿತು.**

**ವಿಶ್ವ ಆರೋಗ್ಯ ಸಂಸ್ಥೆ 2030ರ ವೇಳೆಗೆ "ಮಲೇರಿಯಾ ನಿರ್ಮೂಲನೆ" ಗುರಿ ಹಿಂದಿದೆ. ಭಾರತವೂ ಸಹ ಈ ನಿಟಿನಲ್ಲಿ ಮಲೇರಿಯಾ ಮುಕ್ತ ದೇಶವನ್ನಾಗಿಸಲು ಅಭಿಯಾನ ಹಮ್ಮಿಕೊಂಡಿದೆ. ಕೇಂದ್ರ ಆರೋಗ್ಯ ಇಲಾಖೆ ನೇತೃತ್ವದಲ್ಲಿ ಈ ಕುರಿತು ಕಾರ್ಯ ಯೋಜನೆಯನ್ನು ರೂಪಿಸಲಾಗುತ್ತಿದೆ.**

**ಈ ನಿಟ್ಟಿನಲ್ಲಿ ಕರ್ನಾಟಕ ಸರಕಾರ ಗುರಿ ತಲುಪಲು ಅಗತ್ಯವಾದ ಸಕಲ ಸಿದ್ದತೆಗಳನ್ನು ಹಮ್ಮಿಕೊಳ್ಳುತ್ತಿದೆ.  ರಾಜ್ಯದಲ್ಲಿ ಶೇ. 71 ರಷ್ಟು ಮಲೇರಿಯಾ ಬಾಧಿತ ಜಿಲ್ಲೆ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದು, ಶೇ. 21 ರಷ್ಟು ಬಾಗಲಕೋಟೆ, ಕೊಪ್ಪಳ, ಕಲಬುರಗಿ, ಗದಗ, ಹಾವೇರಿ, ರಾಯಚೂರು, ಯಾದಗಿರಿ, ಜಿಲ್ಲೆಗಳಲ್ಲಿದೆ.  ಉಳಿದ 21 ಜಿಲ್ಲೆಗಳಲ್ಲಿ ಶೇ. 8 ರಷ್ಟು ಮಲೇರಿಯಾ ಪ್ರಕರಣ ದಾಖಲಾಗಿವೆ.  ಈ ಬಗ್ಗೆ ಆಯಾ ಜಿಲ್ಲೆಗಳಲ್ಲಿ ತೆಗೆದುಕೊಳ್ಳಬಹುದಾದ ಸೂಕ್ತ ಕ್ರಮಗಳ ಬಗ್ಗೆ ಸಹ ಚರ್ಚಿಸಲಾಯಿತು.**

**ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಡಾ: ಶಾಲಿನಿ ರಜನೀಶ್, ಆರೋಗ್ಯ ಇಲಾಖೆ ಆಯುಕ್ತ ಸುಬೋಧ್ ಯಾದವ್, ಮತ್ತಿತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.**

ಎಂಎಸ್/ಜೆಡಿ/ಕೆಎಂ

ಛಾಯಾಚಿತ್ರ ಶೀರ್ಷಿಕೆ: IMG 7137, IMG 7141

ಡಾ: ಆರತಿ ಕೃಷ್ಣ, ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಸರ್ಕಾರ, ಬೆಂಗಳೂರು ಮಲೇಶಿಯಾ ಪ್ರಧಾನ ಮಂತ್ರಿ ಶ್ರೀ ಮೊಹಮದ್ ನಜೀಬ್ ಬಿನ್ ತುನ್ ಅಬ್ದುಲ್ ರಜಾಕ್ ಇವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ ಭಾರತ-ಮಲೇಷಿಯಾ ವಾಣಿಜ್ಯ ಒಕ್ಕೂಟ ಏರ್ಪಡಿಸಿದ್ದ ಸಭೆಯಲ್ಲಿ ಪಾಲ್ಗೊಂಡು ಅನಿವಾಸಿ ಭಾರತೀಯರ/ಕನ್ನಡಿಗರ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಹಾಗೂ ಇನ್ನಿತರ ವಾಣಿಜ್ಯ ಉದ್ದೇಶಿತ ವಿಷಯಗಳ ಕುರಿತು ಮಲೇಷಿಯಾ ಪ್ರಧಾನಿಗಳೊಂದಿಗೆ ಮುಕ್ತವಾಗಿ ಚರ್ಚೆ ನಡೆಸಿದರು.

## ಸಾಹಸ ಶಿಕ್ಷಣ ಹಾಗೂ ವ್ಯಕ್ತಿ ವಿಕಸನ ಶಿಬಿರ

**ಬೆಂಗಳೂರು, ಏಪ್ರಿಲ್ 6 , (ಕರ್ನಾಟಕ ವಾರ್ತೆ)**

ಲಾಲ್‌ಬಹದ್ದೂರ್ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಸ್ಪೋರ್ಟ್ಸ್ ಮತ್ತು ಅಡ್ವೇಂಚರ್ ಅಕಾಡೆಇ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿರುವ ಶಿಬಿರವು ಮೇ 4 ರಿಂದ 8 ರವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಶಿಬಿರ, ದೊಡ್ಡಬಳ್ಳಾಪುರ ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಸಾಹಸ ಶಿಕ್ಷಣ ಶಿಬಿರ ಹಾಗೂ ವ್ಯಕ್ತಿ ವಿಕಸನ ಶಿಬಿರವನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದೆ. 12 ರಿಂದ 16 ವರ್ಷದ ವಯೋಮಿತಿಯ ಎಲ್ಲಾ ವಿದ್ಯರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಅಲ್ಲದೆ, ಶಾಲೆಯಲ್ಲಿ ನೋಂದಾಯಿಸಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಎನ್.ಸಿ.ಸಿ. ಭಾರತ್ ಸೇವಾದಳ ಇಕೋ ಕ್ಲಬ್ ಹಾಗೂ ಸಾಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅನುಮತಿ ನೀಡಲಾಗಿದೆ.

ಶಿಬಿರದಲ್ಲಿ ಶಿಬಿರವಾಸ /ಸಹಬಾಳ್ವೆ / ಭಾವೈಕ್ಯತೆ / ನಕ್ಷೆ ಬಿಡಿಸುವುದು / ಏರೋಬಿಕ್ಸ್ /ಪಾಕಶಾಸ್ತ್ರ / ಜಾಡು ಹಿಡಿ / ಚಾರಣ / ರಾಷ್ಟ್ರೀಯ ಭಾವ್ಯಕ್ಯತೆ /ಯೋಗಾಸನ / ಪ್ರಥಮ ಚಿಕಿತ್ಸೆ ಮತ್ತು ಧ್ಯಾನ ಇದರ ಜೊತೆ ಜೊತೆಗೆ ಸಾಹಸ ಚಟುವಟಿಕೆಗೆ ಪೂರಕವಾದ ಮನರಂಜನಾ ಕ್ರೀಡೆ ಶಿಬಿರಾಗ್ನಿ ಮತ್ತು ನಕ್ಷತ್ರ ವೀಕ್ಷಣೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಆಸಕ್ತರು ತಮ್ಮ ಹೆಸರನ್ನು ಏಪ್ರಿಲ್ 14 ರಿಂದ 23 ರೊಳಗೆ ಸಂಜೆ 5.30 ರಿಂದ 7.30 ಗಂಟೆಯೊಳಗೆ ರೂಮ್ ನಂ 27, ಕಂಠೀರವ ಕ್ರೀಡಾ ಸ್ಟೇಡಿಯಂ, ಗೇಟ್ ನಂ 11, ಕಸ್ತೂರಿಬಾ ರಸ್ತೆ, ಬೆಂಗಳೂರು – 560 001 ನೋಂದಾಯಿಸಿಕೊಳ್ಳಬಹುದಾಗಿದೆ ಅಥವಾ ಹೆಚ್ಚಿನ ಮಾಹಿತಿಗಾಗಿ ದೂರವಾಣಿ 9341822000 ಮೂಲಕ ಸಂಪರ್ಕಿಸಬಹುದಾಗಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ. ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳಿಗೂ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುವುದು.

ಎಸ್‌ಎಂ:ಜಿಪಿಆರ್.

# SUMMER CAMP

Bengaluru, April 6, (Karnataka Information)

Bakery Training Unit, University of Agricultural Sciences, Hebbal, Bengaluru – 560 024 is offering the following short term (2-3 days) summer courses for housewives, children and interested candidates.

Home Baking, Baking for School Children, Value added ragi products, Special cakes, Refreshing Juices, Eggless bakery products, Soy processing and value added products, Fruits and vegetable processing, Diet and nutritional management for diabetes, Fireless cooking, Value added Amla products, Chocolate making, Natural Sweetner-Stevia products and Value added millet products.

Interested candidates can contact Co-ordinator, Bakery Training Unit, UAS, Hebbal, Bengaluru 560 024, personally or through phone numbers 080 – 23513370.

Sm/jd/gpr.

# 14 weeks certificate course in Bakery Technology

Bengaluru, April 6, (Karnataka Information)

Bakery Training Unit, University of Agricultural Sciences, Hebbal, Bengaluru – 560 004 has invited application for 14 weeks certificate course in Bakery Technology.

Minimum qualification required is pass in SSLC/10$^{th}$ Standard. The applications may be obtained from Bakery Training Unit by paying a fee of Rs 10/- and the completed application may be sent to Co-ordinator, Bakery Training Unit, UAS, Hebbal, Bengaluru – 560 024.

The last date to issue and receive application is on or before 17.04.2017 at 4.00 PM. Interested candidates can contact Co-ordinator, Bakery Training Unit, UAS, Hebbal, Bengaluru -560 024 personally or through phone 080 – 23513370.

Sm/jd/gpr.

# ವಾಡಿ ಪುರಸಭೆ ಚುನಾವಣೆ – ವೇತನ ಸಹಿತ ರಜೆ ನೀಡಲು ಘೋಷಣೆ

**ಬೆಂಗಳೂರು, ಏಪ್ರಿಲ್ 6 , (ಕರ್ನಾಟಕ ವಾರ್ತೆ)**

ದಿನಾಂಕ 7–04–2017 ಶುಕ್ರವಾರದಂದು ಕಲಬುರಗಿ ಜಿಲ್ಲೆಯ ವಾಡಿ ಪುರಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಈ ಪುರಸಭಾ ಕ್ಷೇತ್ರಗಳಲ್ಲಿನ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿಗಳಿಗೆ, ಕೇಂದ್ರ, ರಾಜ್ಯ ಸರ್ಕಾರಿ ಮತ್ತು ಖಾಸತಿ ಕಾರ್ಖಾನೆ, ಕೈಗಾರಿಕಾ ಸಂಸ್ಥೆಗಳೀಗೆ, ಶಾಲಾ–ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ) ಸೀಮಿತಗೊಳಿಸಿ, ಸರ್ಕಾರವು ಸಾರ್ವತ್ರಿಕ ರಜೆ (ವೇತನ ಸಹಿತ) ಯನ್ನು ಘೋಷಿಸಿ ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆ ಪ್ರಕಟಣೆ ತಿಳಿಸಿದೆ. ಈ ರಜೆಯು ತುರ್ತು ಸೇವೆಗಳಿಗೆ ಅನ್ವಯಿಸುವುದಿಲ್ಲ.

ಚುನಾವಣಾ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಎಲ್ಲಾ ಸರ್ಕಾರಿ ನೌಕರರು ಸದರಿ ದಿನಾಂಕದಂದು ಚುನಾವಣಾ ಕಾರ್ಯದಲ್ಲಿ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.